'ಮನೆ ಮಾಲೀಕ ಹೇಳಿದ್ದಾನೆ'.

'ಆದ್ರೆ ಏಕೆ? ಅವನು ಮನೆಯ ಬಾಡಿಗೆಯನ್ನು ಹೆಚ್ಚಿಸಬೇಕೆಂದು ಹೇಳಿರುವನೇ?'

'ಇಲ್ಲ. ನಮ್ಮ ಮನೆಗೆ ಒಳ್ಳೆಯ ಜನರು ಬರಲ್ಲ ಅಂತ ಅವನು ಹೇಳ್ತಾನೆ.'

'ಆದ್ರೆ ಈಗ ನಮ್ಮ ಮನೆಗೆ ಯಾರೂ ಬರುತ್ತಲೇ ಇಲ್ಲ'. ನನಗೆ ಅವನ ಆರೋಪ ಕೇಳಿ ಆಶ್ಚರ್ಯವಾಯಿತು. ಸೆಲಟ್ ಅಂಕಲ್ ಬರುವುದು ನಿಂತ ನಂತರ ನಮ್ಮ ಮನೆಗೆ ಯಾರೂ ಬಂದಿರಲಿಲ್ಲ. ನೂತನ್ ಸೋದರತ್ತೆಯವರ ಮನೆಗೆ ನಾವೇ ಹೋಗುತ್ತಿದ್ದೆವು, ಅವರು ನಮ್ಮ ಮನೆಗೆ ಬರುತ್ತಿರಲಿಲ್ಲ.

'ಸುಗಂಧಾ, ಇದೇ ಜಗತ್ತು! ಕೆಟ್ಟವರನ್ನು ಕೆಟ್ಟವರೆಂದು ಹೇಳುವ ಧೈರ್ಯ ಯಾರಿಗೂ ಇರಲ್ಲ, ಆದ್ರೆ ಒಳ್ಳೆಯವರನ್ನು ಎಲ್ಲರೂ ಕೆಟ್ಟವರು ಎನ್ನುತ್ತಾರೆ'. ಅಮ್ಮ ವ್ಯಂಗ್ಯದಿಂದ ನಗುತ್ತಾ ಹೇಳಿದ್ದರು.

ಸೆಲಟ್ ಅಂಕಲ್ ಅವರಿಂದ ಬೇರೆಯಾದ ನಂತರ ಅಮ್ಮ ಕಳೆದು ಹೋದವರಂತೆ ಇರುತ್ತಿದ್ದರು. ಅವರ ನೋವನ್ನು ಅನುಭವಿಸುವ ಬುದ್ಧಿ ನನ್ನೊಳಗೆ ವಿಕಸಿತಗೊಳ್ಳುತ್ತಿತ್ತು. ಎರಡು ವಾರಗಳ ನಂತರ ನಾವು ಮನೆಯನ್ನು ಬದಲಾಯಿಸಿದೆವು. ಈಗ ನಾವು ಹೋದ ಮನೆ ಸಹ ಸರ್ಕಾರಿ ಮನೆಯಾಗಿತ್ತು, ಆದರೆ ಅದು ಅಮ್ಮನ ಹೆಸರಿಗೆ ಅಲಾಟ್ ಆಗಿತ್ತು. ಆ ಮನೆಗೆ ಹೋದ ದಿನವೇ ಅಮ್ಮ, 'ಇನ್ನು ನಾವು ಮನೆಯೊಂದನ್ನು ಖರೀದಿಸಬೇಕು, ಅದು ಕಂತಿನಲ್ಲಿ ಸಿಗಲಿ ಅಥವಾ ಸಾಲಕ್ಕೆ ಸಿಗಲಿ, ಮನೆಯನ್ನಂತೂ ನಾನು ಬೇಗನೆ ಕೊಳ್ತೀನಿ!' ಎಂದು ಹೇಳಿದ್ದರು.

'ಮನೆ' ಗೆ ಮನುಷ್ಯನ ಜೀವನದಲ್ಲಿ ತುಂಬಾ ಮಹತ್ವವಿದೆ. ಈ ವಾಸ್ತವಿಕತೆ ನನಗೆ ಅನೇಕ ವರ್ಷಗಳ ನಂತರ ಅರಿವಾಯಿತು.

## ದತ್ತಕ ಸಹೋದರ ಅಥವಾ...

ಬಾಲ್ಯದ ಸಂಗತಿಗಳನ್ನು ನೆನಪಿಸಿಕೊಳ್ಳುವುದು ಸದಾ ಸುಖಕರವಾಗಿರುತ್ತದೆ, ಆದರೆ ನಿಮ್ಮ ಬಾಲ್ಯ ಸುಖಕರ ಘಟನೆಗಳಿಂದ ಕೂಡಿರಬೇಕು. ಆದರೂ ನನ್ನ ಬಾಲ್ಯ ಮತ್ತು ಹುಡುಗುತನ ಪದೇಪದೇ ನನ್ನೆದುರು ಬಂದು ನಿಲ್ಲುತ್ತದೆ. ನಾನು ರಿತಿಕ್‌ನ ಪ್ರೀತಿಯಲ್ಲಿ ಮುಳುಗಿದ್ದಾಗ ಹಾಗೂ ಅವನೊಂದಿಗಿರುವ ಸಾಧ್ಯತೆಗಳ ಬಗ್ಗೆ ಯೋಚಿಸುತ್ತಿರುವಾಗ ನನಗೆ ಆ ದಿನಗಳ ಬಾಲ್ಯ ತುಂಬಾ ನೆನಪಾಗುತ್ತದೆ.

ನನ್ನೆದುರು ಎರಡು ಆಯ್ಕೆಗಳಿದ್ದವು. ನಾನು ರಿತಿಕ್‌ನನ್ನು ವಿವಾಹವಾಗಲು ವಿವಶಗೊಳಿಸಬೇಕು ಅಥವಾ ನಾವಿಬ್ಬರು ವಿವಾಹವಾಗದೆ ಜೊತೆಯಲ್ಲಿರಬೇಕು. ನನ್ನ ಮನಸ್ಸಿನಲ್ಲಿ ವಿವಾಹದ ಬಗ್ಗೆ ಒಳ್ಳೆಯ ಅಭಿಪ್ರಾಯವಿರಲಿಲ್ಲ ಎಂದು ಹೇಳಲು ನನಗೆ ಯಾವುದೇ ಹಿಂಜರಿಕೆಯಿಲ್ಲ. ನಾನು ನನ್ನ ವಿವಾಹದ ಬಗ್ಗೆ ಯೋಚಿಸಿದಾಗಲೆಲ್ಲಾ ನನ್ನ ಮನಸ್ಸು ನನ್ನನ್ನು, ಮದುವೆ ಮಾಡಿಕೊಂಡ ಅಮ್ಮನಿಗೇನು ಸಿಕ್ಕಿತು? ಒಂದು ಉಪನಾಮವಷ್ಟೇ ಅಲ್ಲವೇ ಎಂದು ಯೋಚಿಸುತ್ತೇನೆ. ರಿತಿಕ್‌ನ



## ಕಳೆದ ಸಂಚಿಕೆಯಲ್ಲಿ

ಸುಗಂಧಾ ಅಪ್ಪ–ಅಮ್ಮನ ವಿಚ್ಛೇದನ ವಿಚಾರ ಚರ್ಚೆಯಲ್ಲಿತ್ತು. ಸುಗಂಧಾ ಅಮ್ಮನ ಜೊತೆಯಲ್ಲಿರಬಯಸುತ್ತಾಳೆ. ಕೋರ್ಟ್ ಕೇಸ್ ಸಂಬಂಧ ಅಮ್ಮ ಊರಿಗೆ ಹೋಗಬೇಕಾದಾಗ ನೂತನ್ ಸೋದರತ್ತೆಯ ಮನೆಯಲ್ಲಿ ಸುಗಂಧಾ ಇರಬೇಕಾಗುತ್ತದೆ. ಆದರೆ ವಿಚ್ಛೇದನ ಪ್ರಕ್ರಿಯೆ ಮುಗಿಯದೇ ಒಪ್ಪಂದದ ಮಾತು ಮೇಲ್ಪಂಕ್ತಿ ಹಾಕುತ್ತದೆ. ಸುಗಂಧಾಳನ್ನು ಆದರದಿಂದ ಉಪಚರಿಸಿದ ಅತ್ತೆ, ಆಕೆಯಲ್ಲಿ ಮುಟ್ಟು, ಬ್ರಾ ಧರಿಸುವಿಕೆ ಮುಂತಾದ ಖಾಸಗಿ ವಿಚಾರಗಳನ್ನು ಕೇಳುತ್ತಾಳೆ. ಈಗ ಮುಜುಗರದ ಸರದಿ ಸುಗಂಧಾಳದ್ದು. ಇದಾಗಿ ವರ್ಷದ ನಂತರ ಸುಗಂಧಾ ಋತುಮತಿಯಾಗುತ್ತಾಳೆ. ಸುಗಂಧಾ ಅಮ್ಮನಿಗೆ ಸರ್ಕಾರಿ ಕಚೇರಿಯಲ್ಲಿ ಗುಮಾಸ್ತೆ ಹುದ್ದೆ ಸಿಗುತ್ತದೆ. ಶಾಲೆಯಲ್ಲಿ ಸುಗಂಧಾಗೆ ರೀತಾ ಎಂಬ ಹುಡುಗಿಯ ಪರಿಚಯವಾಗುತ್ತದೆ. ಗೆಳೆತನ ಸಲಿಗೆಯಿಂದ ರೀತಾ, ಪುರುಷ–ಮಹಿಳೆ ಬೆತ್ತಲೆ ಚಿತ್ರ ಇರುವ ಸೆಕ್ಸ್ ಪುಸ್ತಕ ಕೊಟ್ಟು ಓದಲು ಹೇಳಿದಾಗ ಸುಗಂಧಾಗೆ ಶಾಕ್ ಆಗುತ್ತದೆ.

ವಿಚಾರಧಾರೆಗಳು ನನ್ನ ವಿಚಾರಧಾರೆಗಳೊಂದಿಗೆ ಎಂದೂ ಹೊಂದಿಕೆಯಾಗಲಿಲ್ಲ, ಆದರೆ ನಾವಿಬ್ಬರು ಒಂದು ಬಿಂದುವಿಗೆ ಬಂದಾಗ ನಮ್ಮಿಬ್ಬರ ಆಲೋಚನೆಗಳು ಒಂದಾಗಿದ್ದು, ಆ ಬಿಂದು ವಿವಾಹಕ್ಕೆ ಸಂಬಂಧಿಸಿತ್ತು.

'ವಿವಾಹವನ್ನು ಸಂಸ್ಥೆ ಎಂದು ಹೇಳಲಾಗುತ್ತದೆ. ವಿವಾಹ ಚಾರಿಟಿಯ ವಿಷಯವೇ? ಹೌ ಫನ್ನಿ' ರಿತಿಕ್ ವ್ಯಂಗ್ಯದಿಂದ ಹೇಳುತ್ತಿದ್ದ.

'ಓರ್ವ ಮಹಿಳೆ ಮತ್ತು ಪುರುಷ ಒಟ್ಟಿಗಿದ್ದು ಸಂತಸದಲ್ಲಿದ್ದಾಗ, ಅವರನ್ನು ಬಂಧನದಲ್ಲಿ ಬಂಧಿಸುವುದರ ಔಚಿತ್ಯವೇನು? ಇದೊಂದು ಕಮಿಟ್‌ಮೆಂಟ್, ಪ್ರೀತಿಯ ಕಮಿಟ್‌ಮೆಂಟ್, ಹೌದಲ್ವ' ರಿತಿಕ್ ನನ್ನನ್ನು ಕೇಳುತ್ತಿದ್ದ. ನಾನು ಮುಗುಳ್ನಕ್ಕು, ಒಪ್ಪಿಗೆಯಲ್ಲಿ ತಲೆಯಾಡಿಸುತ್ತಿದ್ದೆ.

ಯಾವುದೇ ಬಂಧನದಲ್ಲಿ ಬಂಧಿಸಲ್ಪಡದೆ, ಒಬ್ಬರೊಂದಿಗಿರುವುದು ಹೆಚ್ಚು ಶಾಂತಿದಾಯಕ, ಕಡೇ ಪಕ್ಷ ನೀವು ನಿಮ್ಮಿಚ್ಛೆಗನುಸಾರ ಸ್ವಾತಂತ್ರ್ಯವನ್ನಂತೂ ಪಡೆಯಬಲ್ಲಿರಿ ಎಂದು ನನಗೂ ಅನ್ನಿಸುತ್ತದೆ. ಪುರುಷ 'ಪತಿ'ಯಾಗುತ್ತಲೇ ತನ್ನ ವಿಚಾರಗಳಿಂದ ಬದಲಾಗುತ್ತಾನೆ. ಯಾವ ಹೆಣ್ಣಿಗಾಗಿ ಅವನು ಪ್ರಾಣವನ್ನೇ ಕೊಡುತ್ತಿದ್ದನೋ, ಯಾವ ಹೆಣ್ಣಿನ ಕಾಲಿಗೆ ಮುಳ್ಳು ಚುಚ್ಚಿದಾಗ ಅವನ ಮನಸ್ಸಿನಲ್ಲಿ ನೋವು ಉದ್ಭವವಾಗುತ್ತಿತ್ತೋ, ಅದೇ ಹೆಣ್ಣಿಗೆ ಹೊಡೆಯುವ ಗದರಿಸುವ ಅಧಿಕಾರ ಅವನಿಗೆ ಸಿಗುತ್ತದೆ; ಅವನು ಈ ಅಧಿಕಾರವನ್ನು ಪ್ರಯೋಗಿಸುವಲ್ಲಿ ಸಹ ಹಿಂಜರಿಯುವುದಿಲ್ಲ. ಈ ಅಧಿಕಾರವನ್ನು ಅವನು ತನ್ನ ಪುರುಷತ್ವದ ಪರ್ಯಾಯವೆಂದು ತಿಳಿಯುತ್ತಾನೆ.

ರಿತಿಕ್ ನನ್ನ ಮನೆಗೆ ಬಂದು ಹೋಗುವುದು ಎಷ್ಟು ಹೆಚ್ಚಿತ್ತೆಂದರೆ, ಅವನು ಎರಡೆರಡು, ಮೂರು ಮೂರು ರಾತ್ರಿ ನನ್ನ ಮನೆಯಲ್ಲಿಯೇ ಉಳಿದುಕೊಳ್ಳುತ್ತಿದ್ದ. ರೀತಾ ನನ್ನ ಮನಸ್ಸಿನಲ್ಲಿ ಲೈಂಗಿಕ ಸಂಬಂಧಗಳ ಕಿಡಿಗಳನ್ನು ಹೊತ್ತಿಸಿದ್ದಳು, ಅದನ್ನು ರಿತಿಕ್ ಪ್ರಾಯೋಗಿಕವಾಗಿ ಉದ್ರೇಕಿಸಿದ್ದ. ನನ್ನ ದೇಹ ರಿತಿಕ್‌ನೊಂದಿಗೆ ಅಪಾರ ಸುಖವನ್ನು ಅನುಭವಿಸುತ್ತಿತ್ತು. ನಾವು ತಡ ರಾತ್ರಿಯವರೆಗೆ ಎಚ್ಚರವಾಗಿರುತ್ತಿದ್ದೆವು, ಒಂದಕ್ಕಿಂತ ಹೆಚ್ಚು ಬಾರಿ ಒಂದೇ ಆಟವನ್ನು ಪುನರುಚ್ಚರಿಸುವ ಪ್ರಯತ್ನವನ್ನು ಮಾಡುತ್ತಿದ್ದೆವು. ಈ ಪ್ರಯತ್ನವನ್ನು ರಿತಿಕ್ ಹೆಚ್ಚು ಮಾಡಬೇಕಿತ್ತು. ಅವನು ಪುರುಷನಾಗಿದ್ದನಲ್ಲ!

ನಮ್ಮ ಸಂಬಂಧಗಳ ಬಗ್ಗೆ ಮೊಹಲ್ಲಾದಲ್ಲಿ ಪಿಸುಮಾತುಗಳು ಆರಂಭವಾಗಿತ್ತು, ಇದರ ವಾಸನೆ ತಾರಾಳ ಮಾತುಗಳಿಂದ ತಿಳಿದಿತ್ತು.

'ಇವತ್ತು ಸಾಹೇಬ್ರು ಇಲ್ಲಿಯೇ ಇರ್ತಾರಾ?' ತಾರಾಬಾಯಿ ಕೇಳುತ್ತಿದ್ದಳು.

'ಇದನ್ನು ಸಾಹೇಬ್ರು ಕೊಟ್ಟಿರುವರೇ?'

'ಸಾಹೇಬ್ರು ತುಂಬಾ ಒಳ್ಳೆಯವರು'

'ಸಾಹೇಬ್ರೊಂದಿಗೆ ನಿಮ್ಮ ಜೋಡಿ ಚೆನ್ನಾಗಿದೆ' ಇತ್ಯಾದಿ ಇತ್ಯಾದಿ. ರಿತಿಕ್ ಬಗ್ಗೆ ಅವಳು 'ಸಾಹೇಬ್ರು ಸಾಹೇಬ್ರು' ಅನ್ನುವುದು ನನಗೆ ಇಷ್ಟವಾಗುತ್ತಿರಲಿಲ್ಲ. ಆದರೆ ನಾನು ಕೇಳಿಯೂ ಕೇಳದಂತೆ ಇರುತ್ತಿದ್ದೆ. ಅದೊಂದು ದಿನ ನನ್ನ ನೆರೆಮನೆಯಳು ನನ್ನನ್ನು ಕೇಳಿದಳು:

'ಮದುವೆ ಯಾವಾಗ?'

'ಇನ್ನೂ ನಿಶ್ಚಿತವಾಗಿಲ್ಲ'.

ನಾನು ಅವಳೊಂದಿಗೆ ಚರ್ಚಿಸಲು ಬಯಸುತ್ತಿರಲಿಲ್ಲ. ಮೂರು ಮಕ್ಕಳ ತಾಯಿಯಾಗಿದ್ದ ಆ ಮಹಿಳೆ ಹೆಣ್ಣುಗಂಡಿನ ಸಂಬಂಧಗಳನ್ನು ವಿವಾಹದ ರೂಪದಲ್ಲಿಯೇ ನೋಡುತ್ತಿದ್ದಳು.

'ಈಗ ಮಾಡಿಕೊಳ್ಳಬೇಕು, ಹುಡುಗ ಪ್ರಾಮಾಣಿಕ, ಅವನ ಮನಸ್ಸು ಬದಲಾದರೆ, ನಿಮಗೆ ಕೆಟ್ಟ ಹೆಸರು ಬರುತ್ತೆ'. ಅಂದು ನನ್ನ ಆ ನೆರೆಮನೆಯವಳು ಗಡಿ ದಾಟಿದಳು.

'ನನಗೆ ಕೆಟ್ಟ ಹೆಸರು? ಏಕೆ?' ನನಗೆ ಅವಳ ಹೇಳಿಕೆಯ ಮರ್ಮ ಅರ್ಥವಾಗುತ್ತಿತ್ತು, ಆದರೂ ಅದನ್ನು ಅವಳ ಬಾಯಿಯಿಂದಲೇ ಕೇಳಲು ಬಯಸುತ್ತಿದ್ದೆ.

'ನೋಡಿ, ಹುಡುಗ ಪೋಕರಿಯಾದರೂ, ಅವನಿಗೆ ಯಾರೂ ಏನೂ ಹೇಳಲ್ಲ. ಆದರೆ ಹುಡುಗಿಯ ಜೀವನ ಕನ್ನಡಿಯಂತೆ, ಅದರಲ್ಲಿ ಒಂದು ಗೆರೆ ಬಿದ್ದರೂ, ಎಲ್ಲರಿಗೂ ಕಾಣಿಸುತ್ತೆ. ಅಲ್ದೆ ಅವನು ನಿಮ್ಮ ಮನೆಯಲ್ಲೇ ಇರ್ತಾನೆ.' ನನಗೆ ಅತೀವ ಸಿಟ್ಟು ಬಂತು. ಒಂದು ಕಡೆ ಅವಳು ಸಮಾಜದರ್ಶನದ ತುಣುಕನ್ನು ತೋರಿಸಿದಳು, ಇನ್ನೊಂದು ಕಡೆ, 'ನಿಮ್ಮ ಮನೆಯಲ್ಲೇ ಇರ್ತಾನೆ' ಎಂದು ಕಪಾಳಕ್ಕೆ ಹೊಡೆದಂತೆ ಹೇಳಿದ್ದಳು. ಅವಳು ರಿತಿಕ್‌ನ ಚಾರಿತ್ರ್ಯ ಬಗ್ಗೆ ಹೇಳಿದ್ದಾಗ್ಯೂ, ನನಗೇ ಪೆಟ್ಟಾಗಿತ್ತು. (ಸಶೇಷ)